* ಗರಿಷ್ಠ 27.6 ಕ್ಯೂಸೆಕ್ಸ್ ನೀರನ್ನು ಮಾತ್ರ ಅಭಿವೃದ್ದಿದಾರರು ಉಪಯೋಗಿಸಿಕೊಳ್ಳಬೇಕೆಂದು ಈ ಕುರಿತಂತೆ ರಚಿಸಿದ ತಾಂತ್ರಿಕ ನಕ್ಷೆಗಳಿಗೆ ಅನುಮೋದನೆ ನೀಡಿದೆ.

* ಅದೂ ಅಲ್ಲದೇ State water policy ಯ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಗೆ ಅನುಮತಿ ನೀಡಲಾಗಿದೆ.

674(1343) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕು ತಾಳಿಕೋಟೆ – ಪಿರಾಪುರ್ ಮಾರ್ಗವಾಗಿ ಕೆಂಬಾವಿಗೆ ಹೋಗುವ ರಸ್ತೆ ಸಂಪೂರ್ಣ ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ರಸ್ತೆಯ ದುರಸ್ತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು ಬಂದಿದೆ.

ಆ) ಸದರಿ ರಸ್ತೆಯು ಹುನಗುಂದ ಸುರಪುರ ರಾಜ್ಯ ಹೆದ್ದಾರಿ ಸಂ:60 ರ ಭಾಗವಾಗಿದೆ. ಈ ರಸ್ತೆಯನ್ನು ಇತ್ತೀಚೆಗೆ ರಾ.ಹೆ.ಎಂದು ಮೇಲ್ದರ್ಜೆಗೇರಿಸಲಾಗಿದೆ. ಒಟ್ಟು:44.0 ಕಿಮೀ ಪೈಕಿ 2.10 ರಸ್ತೆ ಸುಧಾರಣೆಗಾಗಿ 2004–05 ನೇ ಸಾಲಿಗೆ ರೂ.18.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದ್ದು ಕಾಮಗಾರಿಯನ್ನು ಮಾರ್ಚ್ 2005 ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಸದರಿ ರಸ್ತೆಯನ್ನು 2005 ರಿಂದ 2008 ರವರೆಗೆ 3 ವರ್ಷಗಳ ನಿರ್ವಹಣೆ ಅಡಿಯಲ್ಲಿ ಕೆಆರ್‌ಡಿಸಿಎಲ್ ನಿಂದ ರೂ. 135.0 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲು ಯೋಜಿಸಲಾಗಿದೆ.

675(1344) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ

ಆ) ಈಗಾಗಲೇ ನಡೆಯುತ್ತಿರುವ ವಿವಿಧ ಇಲಾಖೆಯ ಕಛೇರಿಗಳು ಗ್ರಾಮದ ಪುರಾತನ ಒಂದು ಚಿಕ್ಕದಾದ ಹಂಚಿನ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಈ ಬಗ್ಗೆ ಸರ್ಕಾರಕ್ಕೆ ಹಲವಾರು ಬಾರಿ ಪ್ರಸ್ತಾವನೆ ಸಲ್ಲಿಸಿದ್ದರು ಸಹ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದಿರಲು ಕಾರಣವೇನು (ವಿವರಗಳನ್ನು ನೀಡುವುದು)?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮುದ್ದೇಬಿಹಾಳ ತಾಲ್ಲೂಕು ಸೇರಿದಂತೆ ರಾಜ್ಯದ 86 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧದ ನಿರ್ಮಾಣದ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಾಲ್ಲೂಕಿನ ಇಲಾಖೆಯ ಕಾರ್ಯಾಲಯಗಳು ಬೇರ ಬೇರೆ ಕಟ್ಟಡಗಳಲ್ಲಿ ನಿರ್ವಹಿಸುತ್ತಿವೆ.

ಇ) ಈ ಕಟ್ಟಡದ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯುವ ಪ್ರಯತ್ನ ಜಾರಿಯಲ್ಲಿದೆ.